# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 755 |
| ಸದಸ್ಯರ ಹೆಸರು: | ಶ್ರೀ ಅ.ದೇವೇಗೌಡ [ಪದವೀಧರರ ಕ್ಷೇತ್ರ] |
| ಉತ್ತರಿಸುವ ದಿನಾಂಕ: | 12.07.2023 |
| ಉತ್ತರಿಸುವ ಸಚಿವರು: | ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು ಮೇಲುಕೋಟೆ ಹೋಬಳಿಯ ಕದಲಗೆರೆಯಿಂದ ಕಾಡೇನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯು ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಪ್ರಸ್ತುತ ರಸ್ತೆಯ ಸ್ಥಿತಿಗತಿಗಳ ಬಗ್ಗೆ ಪರಿಶೀಲಿಸಿ ವರದಿಯನ್ನು ನೀಡುವುದು. | ಮೇಲುಕೋಟೆ ಹೋಬಳಿಯ ಕದಲಗೆರೆಯಿಂದ ಕಾಡೇನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯು ಕದಲಗೆರೆ ಗ್ರಾಮದ ಸರಪಳಿ 4.50 ಕಿ.ಮೀ. ರಿಂದ ಪ್ರಾರಂಭವಾಗಿ ಕಾಡೇನಹಳ್ಳಿಯ ಗ್ರಾಮದ ಸರಪಳಿ 6.05 ಕಿ.ಮೀ.ವರೆಗೆ 1.55 ಕಿ.ಮೀ ಉದ್ದ ಇದ್ದು, ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ.<br>ಸದರಿ ರಸ್ತೆಯ ಭಾಗವು ಡಾಂಬರೀಕರಣದಿಂದ ಕೂಡಿದ್ದು, ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ಈ ಹಿಂದೆ ಮಾಡಲಾದ ಡಾಂಬರೀಕರಣದ ರಸ್ತೆಯ ಸಂಪೂರ್ಣ ವಿವರ ನೀಡುವುದು; ಪ್ರಸ್ತುತ ಉಂಟಾದ ಮಳೆಯ ಅವಾಂತರದಿಂದ ರಸ್ತೆಯು ತುಂಬಾ ಹದಗೆಟ್ಟಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿದ್ದಾರೆಯೆ; ಅದರ ವಿವರ ಒದಗಿಸುವುದು | ಸದರಿ ರಸ್ತೆಯನ್ನು 10 ವರ್ಷಗಳ ಹಿಂದೆ ಡಾಂಬರೀಕರಣ ಮಾಡಲಾಗಿರುತ್ತದೆ. ಕಳೆದ ಸಲ ಉಂಟಾದ ಮಳೆಯ ಸಂದರ್ಭದಲ್ಲಿ ಸದರಿ ರಸ್ತೆಯನ್ನು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರು ಪರಿಶೀಲಿಸಿರುತ್ತಾರೆ. |
| ಇ) | ಕದಲಗೆರೆಯಿಂದ ಕಾಡೇನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯ ಮುಖಾಂತರ ಹಿರಿಯರು ಹಾಗೂ ಶಾಲೆಗೆ ಹೋಗುವ ಮಕ್ಕಳು ಓಡಾಡಲು ತುಂಬಾ ತೊಂದರೆಯಾಗಿರುವುದರಿಂದ ರಸ್ತೆ ಡಾಂಬರೀಕರಣವನ್ನು ತುರ್ತಾಗಿ ಮಾಡಲಾಗುವುದೆ: (ಸಂಪೂರ್ಣ ಮಾಹಿತಿ ನೀಡುವುದು) | ಪಾಂಡವಪುರ ತಾಲ್ಲೂಕು, ಮಾಣಿಕ್ಯನಹಳ್ಳಿಯಿಂದ ಗರುಡಪುರಕ್ಕೆ ಸೇರುವ ರಸ್ತೆ ಮಾರ್ಗ ಗೌಡಗೆರೆ–ಕಾಡೇನಹಳ್ಳಿ–ಕದಲಗೆರೆ–ದೊಡ್ಡಿಘಟ್ಟ ಸೇರುವ ರಸ್ತೆಯ ಸರಪಳಿ:0.00 ಕಿ.ಮೀ ನಿಂದ 9.00 ಕಿ.ಮೀ.ವರೆಗೆ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಾಗಿ 2022–23ನೇ ಸಾಲಿನ ಲೆಕ್ಕಶೀರ್ಷಿಕೆ: 5054–04–337–0–01–154 ಜಿಲ್ಲಾ ಮತ್ತು ಇತರೆ ರಸ್ತೆಗಳು–ಸುಧಾರಣೆಗಳು ಅಪೆಂಡಿಕ್ಸ್–ಇ ಅಡಿಯಲ್ಲಿ ಸೇರಿಸುವ ಷರತ್ತಿಗೊಳಪಟ್ಟು ರೂ.350.00 ಲಕ್ಷಗಳ ಮೊತ್ತಕ್ಕೆ ಅನುಮೋದನೆಗೊಂಡಿದ್ದು, ಈ ಕಾಮಗಾರಿಯಲ್ಲಿ ಕದಲಗೆರೆಯಿಂದ ಕಾಡೇನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯ ಸರಪಳಿ 4.50 ರಿಂದ 6.00 ಕಿ.ಮೀ.ವರೆಗೆ ರಸ್ತೆ ಅಭಿವೃದ್ಧಿ ಸೇರಿರುತ್ತದೆ.<br>ಸದರಿ ರಸ್ತೆ ಕಾಮಗಾರಿಯ ಆರ್ಥಿಕ ಬಿಡ್ ಅನುಮೋದನೆ ಹಂತದಲ್ಲಿದ್ದು, ಈ ಸಂದರ್ಭದಲ್ಲಿ |
| ಈ) | ಕಳೆದ ಅಧಿವೇಶನದಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ್ದರೂ ಸಹ ಇದುವರೆವಿಗೂ ರಸ್ತೆಯ ಡಾಂಬರೀಕರಣ ಮಾಡದೆ ಇರಲು ಕಾರಣವೇನು? (ಸಂಪೂರ್ಣ ವಿವರ ನೀಡುವುದು) | |

| | | |
|---|---|---|
| | | ಸರ್ಕಾರದ ಸುತ್ತೋಲೆ ಸಂಖ್ಯೆ: ಆ.ಇ. 1 ಟಿ.ಎಫ್.ಪಿ. 2023, ದಿನಾಂಕ: 22.05.2023 ರಲ್ಲಿ ಹೊಸ ಕಾಮಗಾರಿಯನ್ನು ಕೈಗೊಳ್ಳದಂತೆ ನಿರ್ದೇಶನ ನೀಡಿರುವ ಕಾರಣ ಟೆಂಡರ್ ಪ್ರಕ್ರಿಯೆ ತಡೆಹಿಡಿಯಲಾಗಿದ್ದು, ಸದರಿ ಸುತ್ತೋಲೆಯಲ್ಲಿನ ನಿಬಂಧನೆ ತೆರವುಗೊಳಿಸಿದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. |

ಲೋಇ 26 ಸಿಕ್ಯೂಎನ್ 2023(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು